# ಬದುಕಿನ ಆಶಾಕಿರಣ: ಕಿಡ್ನಿ ಕಸಿ

**ಮೂ**ತ್ರಪಿಂಡ (ಕಿಡ್ನಿ) ಕಸಿ ಎಂದರೆ ಜೀವಂತ ದಾನಿ ಅಥವಾ ಮೃತರಾದ ದಾನಿಯ ಆರೋಗ್ಯಪೂರ್ಣ, ಸಮರ್ಪಕವಾಗಿ ಕಾರ್ಯನಿರ್ವಹಿಸುವ ಮೂತ್ರಪಿಂಡವನ್ನು ಎರಡೂ ಮೂತ್ರಪಿಂಡಗಳ ವೈಫಲ್ಯಕ್ಕೆ ತುತ್ತಾಗಿರುವ ವ್ಯಕ್ತಿಗೆ ಶಸ್ತ್ರಚಿಕಿತ್ಸೆ ಮೂಲಕ ಅಳವಡಿಸುವ ಪ್ರಕ್ರಿಯೆಯಾಗಿದೆ.

ಮೂತ್ರಪಿಂಡದ ಮುಖ್ಯ ಕೆಲಸ ಎಂದರೆ ಶೋಧಿಸುವುದು (ಫಿಲ್ಟರ್). ಹೀಗೆ ಸೋಸಿ ನೀರು, ಉಪ್ಪು, ಖನಿಜಗಳು ಸೇರಿದಂತೆ ದೇಹದಲ್ಲಿನ ಹೆಚ್ಚುವರಿ ನೀರನ್ನು ಮೂತ್ರದ ರೂಪದಲ್ಲಿ ಹೊರ ಹಾಕುವುದಾಗಿದೆ. ಇವುಗಳ ಜೊತೆಗೆ, ಹಿಮೋಗ್ಲೋಬಿನ್ ಉತ್ಪಾದನೆ, ವಿಟಮಿನ್–ಡಿ ಅನ್ನು ಕ್ರಿಯಾಶೀಲವಾಗಿಸುವುದು ಮೂತ್ರಪಿಂಡಗಳ ಕಾರ್ಯವಾಗಿರುತ್ತದೆ. ಹಲವಾರು ಕಾರಣಗಳಿಂದ ಮೂತ್ರಪಿಂಡಗಳು ಅದರ ಸಾಮರ್ಥ್ಯಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಕಳೆದುಕೊಳ್ಳುತ್ತವೆ, ಅಂದರೆ ತಮ್ಮ ಕಾರ್ಯನಿರ್ವಹಣೆಯಲ್ಲಿ ಶೇ.90 ರಷ್ಟು ಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ. ಇದರ ಪರಿಣಾಮವಾಗಿ ಶರೀರದಲ್ಲಿ ವಿಷಕಾರಿ ಅಂಶಗಳ ಪ್ರಮಾಣ ಹೆಚ್ಚುತ್ತದೆ. ಇದನ್ನು ಮೂತ್ರಪಿಂಡ ಕಾಯಿಲೆಯ ಕೊನೆಯ ಹಂತ ಅಥವಾ ಮೂತ್ರಪಿಂಡ ವೈಫಲ್ಯ ಎಂದು ಕರೆಯಲಾಗುತ್ತದೆ.

**ಮೂತ್ರಪಿಂಡ ಕಾಯಿಲೆ (ಸಿಕೆಡಿ) ಹಂತಗಳು**

ಸಾಮಾನ್ಯ ಪ್ರಕರಣಗಳಲ್ಲಿ ಮೂತ್ರಪಿಂಡ ಕಾಯಿಲೆಯ ಕೊನೆಯ ಹಂತವು ಇವುಗಳನ್ನು ಒಳಗೊಂಡಿರುತ್ತದೆ,

- ಮಧುಮೇಹ
- ಅನಿಯಂತ್ರಿತ ರಕ್ತದೊತ್ತಡ
- ದೀರ್ಘಕಾಲದ ಗ್ಲೊಮೆರುಲೋನೆಫ್ರೈಟಿಸ್ ಪಾಲಿಸಿಸ್ಟಿಕ್ ಮೂತ್ರಪಿಂಡ ಕಾಯಿಲೆ (ಆನುವಂಶೀಯ)
- ಗೊತ್ತಿರದ ಕಾರಣಗಳು

ಇಎಸ್‌ಆರ್‌ಡಿ ಸಮಸ್ಯೆಯಿಂದ ಬಳಲುತ್ತಿರುವವರು ಡಯಾಲಿಸಿಸ್ (ಹಿಮೋಡಯಾಲಿಸಿಸ್ ಅಥವಾ ಪೆರಿಟೋನಿಯಲ್ ಡಯಾಲಿಸಿಸ್) ಅಥವಾ ಮೂತ್ರಪಿಂಡ ಕಸಿ ಮಾಡಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಮೂತ್ರಪಿಂಡ ವೈಫಲ್ಯದ ಪ್ರಕರಣಗಳಿಗೆ ಹೋಲಿಸಿದರೆ ಜೀವನಪರ್ಯಂತ ಮಾಡಿಸಿಕೊಳ್ಳುವ ಡಯಾಲಿಸಿಸ್‌ಗಿಂತ ಮೂತ್ರಪಿಂಡ ಕಸಿಯು ಉತ್ತಮ ಆಯ್ಕೆಯಾಗಿದೆ. ಮೂರು ರೀತಿಯ ಮೂತ್ರಪಿಂಡ ಕಸಿಗಳಿದ್ದು, ಅವುಗಳ ಸರ್ಜಿಕಲ್ ಪ್ರಕ್ರಿಯೆ ಒಂದೇ ಆಗಿದೆ.

- **ಜೀವಂತ ದಾನಿಯಿಂದ ಪಡೆದ ಮೂತ್ರಪಿಂಡ ಕಸಿ**
- **ಮೃತ ದಾನಿಯಿಂದ ಪಡೆದ ಮೂತ್ರಪಿಂಡ ಕಸಿ**
- **ಪೂರ್ವಭಾವಿ (ಪ್ರಿ–ಎಂಪ್ಟೀವ್) ಮೂತ್ರಪಿಂಡ ಕಸಿ**

ಡಯಾಲಿಸಿಸ್‌ಗೆ ಹೋಲಿಸಿದರೆ ಮೂತ್ರಪಿಂಡ ಕಸಿಯಿಂದ ಅನೇಕ ಪ್ರಯೋಜನಗಳಿವೆ – ಅವುಗಳೆಂದರೆ ಧೀರ್ಘಕಾಲ ಬದುಕುವ ನಿರೀಕ್ಷೆ, ಆರೋಗ್ಯಕರ ಜೀವನ ನಡೆಸಬಹುದು, ಪಥ್ಯದ (ಡಯಟ್) ಅಗತ್ಯವಿಲ್ಲದಿರುವುದು, ಕಡಿಮೆ ವೆಚ್ಚ, ನಿಯಮಿತವಾಗಿ ಆಸ್ಪತ್ರೆಗೆ ಹೋಗುವ ಅಗತ್ಯವಿಲ್ಲ, ಉತ್ತಮ ಆರೋಗ್ಯ ಮತ್ತು ಅನೀಮಿಯಾದಿಂದ ಮುಕ್ತಿ.

ಮೂತ್ರಪಿಂಡ ವೈಫಲ್ಯಕ್ಕೆ ತುತ್ತಾದ ಎಲ್ಲ ರೋಗಿಗಳಿಗೂ ಮೂತ್ರಪಿಂಡ ಕಸಿ ಮಾಡುವುದು ಸಾಧ್ಯವಿಲ್ಲ. ಅಂತಹ ಪ್ರಕರಣಗಳು ಯಾವುವೆಂದರೆ,

- ವಯಸ್ಸಾದವರಿಗೆ (75 ವರ್ಷ ಮೇಲ್ಪಟ್ಟವರಿಗೆ)
- ತೀವ್ರ ಸ್ವರೂಪದ ಹೃದಯ ಸಮಸ್ಸೆ
- ಕ್ಯಾನ್ಸರ್‌ನಿಂದ ಬಳಲುತ್ತಿದ್ದರೆ ಅಥವಾ ಸದ್ಯದಲ್ಲೇ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆದಿದ್ದಲ್ಲಿ
- ಮದ್ಯಪಾನ ಮತ್ತು ಡ್ರಗ್ಸ್ ವ್ಯಸನಿಯಾಗಿದ್ದರೆ

ಎರಡೂ ಮೂತ್ರಪಿಂಡಗಳು ವೈಫಲ್ಯಕ್ಕೆ ಒಳಗಾಗಿದ್ದರೂ ಸಹ ಕಸಿ ಮಾಡಲು ಒಂದು ಮೂತ್ರಪಿಂಡ ಮಾತ್ರ ಸಾಕಾಗುತ್ತದೆ. ಜೀವಂತ ದಾನಿಯ ಮೂತ್ರಪಿಂಡ ಕಸಿಯು ಒಂದು ಆಯ್ಕೆಯಾಗಿದೆ. ಕುಟುಂಬ ಸದಸ್ಯರಲ್ಲಿಯೇ ಹೊಂದಾಣಿಕೆಯಾಗುವ ದಾನಿಯು ಸಿಕ್ಕರೆ (ಹೊಂದಾಣಿಕೆಯಾಗುವ ರಕ್ತದ ಗುಂಪು, ಆರೋಗ್ಯವಂತ, 18 ರಿಂದ 65 ವರ್ಷದೊಳಗಿನವರು), ಜೀವಂತ ದಾನಿಯ ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ಮೂತ್ರಪಿಂಡ ದಾನಿಯು ಆರೋಗ್ಯಕರ ಜೀವನಕ್ಕಾಗಿ ಜೀವನಪರ್ಯಂತ ಮುಂಜಾಗರೂಕತೆ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಉತ್ತಮ.

ವ್ಯಕ್ತಿಯು ಹಿಮೋಡಯಾಲಿಸಿಸ್‌ಗೆ ಒಳಗಾಗದೇ ಮೂತ್ರಪಿಂಡ ಕಸಿ ಮಾಡಿಸಿಕೊಳ್ಳುವುದನ್ನು ಪೂರ್ವಭಾವಿ ಮೂತ್ರಪಿಂಡ ಕಸಿ ಎಂದು ಕರೆಯಲಾಗುತ್ತದೆ.

**ಯಾವ ರಕ್ತದ ಗುಂಪಿಗೆ ಯಾವ ಗುಂಪು ಹೊಂದಿಕೆಯಾಗುತ್ತದೆ?**

| ಸ್ವೀಕರಿಸುವವನು | ದಾನಿ |
|---|---|
| O | O |
| A | A ಅಥವಾ O |
| B | B ಅಥವಾ O |
| AB | AB, A, B, ಅಥವಾ O |






ಹೊಂದಾಣಿಕೆಯಾಗುವ ಜೀವಂತ ದಾನಿಯು ಲಭ್ಯವಿಲ್ಲದಿದ್ದರೆ ಮೆದುಳು ನಿಷ್ಕ್ರಿಯಗೊಂಡ ದಾನಿಯ ಮೂತ್ರಪಿಂಡ ಪಡೆದು ಕಸಿ ಮಾಡುವುದನ್ನು ಆರಿಸಿಕೊಳ್ಳಬಹುದು. ಅಂದರೆ, ತಲೆಗೆ ಗಾಯ ಅಥವಾ ಮೆದುಳಿನ ರಕ್ತಸ್ರಾವ, ಮೆದುಳು ನಿಷ್ಕ್ರಿಯಗೊಂಡಿದೆ (ಬ್ರೈನ್ ಡೆತ್) ಎಂದು ಘೋಷಿಸಲಾಗಿರುವ ವ್ಯಕ್ತಿಗಳಿಂದ ಮೂತ್ರಪಿಂಡ ದಾನ ಪಡೆಯುವುದು. ಆ ವ್ಯಕ್ತಿಯ ಕುಟುಂಬದ ಸದಸ್ಯರು ಒಪ್ಪಿದರೆ ಅವರ ಅಂಗಾಂಗಗಳನ್ನು ಅಗತ್ಯ ಇರುವ ಇತರ ವ್ಯಕ್ತಿಗಳಿಗೆ ಕಸಿ ಮಾಡಬಹುದಾಗಿದೆ.

**ಮೂತ್ರಪಿಂಡ ಕಸಿ ಮಾಡುವುದು ಹೇಗೆ?**

ಮೂತ್ರಪಿಂಡ ಕಸಿಯನ್ನು ಜನರಲ್ ಅನಸ್ತೇಷಿಯಾ ನೆರವಿನಿಂದ ಕೈಗೊಳ್ಳಲಾಗುತ್ತದೆ. ಸಾಮಾನ್ಯವಾಗಿ ಜನ್ಮದತ್ತವಾಗಿರುವ ಮೂಲ ಮೂತ್ರಪಿಂಡಗಳನ್ನು ತೆಗೆದುಹಾಕುವುದಿಲ್ಲ, ಆದರೆ, ಅತ್ಯಂತ ವಿರಳವೆನಿಸುವ ಸಂದರ್ಭಗಳಲ್ಲಿ ಅಂದರೆ, ಪಾಲಿಸಿಸ್ಟಿಕ್ ನಿಂದ ಹಿಗ್ಗಿರುವ ಕಿಡ್ನಿಯನ್ನು ತೆಗೆದುಹಾಕುವ ಅನಿವಾರ್ಯತೆ ಇರುತ್ತದೆ. ಹೊಸ ಮೂತ್ರಪಿಂಡದ ರಕ್ತನಾಳಗಳನ್ನು ಕಿಬ್ಬೊಟ್ಟೆಯ ಕೆಳಗಿನ ರಕ್ತನಾಳಗಳಿಗೆ ಜೋಡಿಸಲಾಗುತ್ತದೆ. ಹೊಸ ಮೂತ್ರಪಿಂಡದ ಮೂತ್ರನಾಳಗಳನ್ನು ರೋಗಿಯ ಮೂತ್ರಕೋಶಗಳೊಂದಿಗೆ ಜೋಡಿಸಲಾಗುತ್ತದೆ. ಬಳಿಕ ಸಾಮಾನ್ಯ ರೀತಿಯಲ್ಲಿ ಮೂತ್ರ ವಿಸರ್ಜನೆ ಮಾಡಬಹುದು.

**ಮೂತ್ರಪಿಂಡ ಕಸಿಯ ಸಮಸ್ಯೆಗಳು**

ಕಿಡ್ನಿ ವೈಫಲ್ಯಕ್ಕೆ ಕಸಿಯು ಅತ್ಯುತ್ತಮ ಚಿಕಿತ್ಸೆಯಾಗಿದ್ದರೂ ಅದರಿಂದ ಪೂರ್ಣಪ್ರಮಾಣದಲ್ಲಿ ಗುಣಮುಖರಾಗಲು ಸಾಧ್ಯವಿಲ್ಲ. ಯಾವುದೇ ಶಸ್ತ್ರಚಿಕಿತ್ಸೆಯಲ್ಲಿ ಇರಬಹುದಾದ ರಿಸ್ಕ್ ಅಥವಾ ಸಮಸ್ಯೆಗಳು ಕಿಡ್ನಿ ಕಸಿ ಶಸ್ತ್ರಚಿಕಿತ್ಸೆಯಲ್ಲಿಯೂ ಇರುತ್ತದೆ. ದಾನಿಯ ಅಂಗಾಂಗವನ್ನು ತಿರಸ್ಕರಿಸಬಹುದು. ಔಷಧಿಗಳಿಂದ ವ್ಯತಿರಿಕ್ತ ಪರಿಣಾಮಗಳಾಗಬಹುದು, ಸೋಂಕು ಆಗಬಹುದು, ಕೆಲವೊಂದು ಸಂದರ್ಭಗಳಲ್ಲಿ ಕಸಿ ಮಾಡಿಸಿಕೊಂಡಿರುವ ಕಿಡ್ನಿಗೂ ಹಿಂದೆ ಇದ್ದ ಸಮಸ್ಯೆಗಳೂ ಮರುಕಳಿಸಬಹುದು.

**ವ್ಯಕ್ತಿಯೊಬ್ಬ ಒಂದೇ ಒಂದು ಕಿಡ್ನಿ ಹೊಂದಿದ್ದರೂ ಆರೋಗ್ಯಕರ ಜೀವನ ನಡೆಸಬಹುದು**

**ಡಾ. ನವೀನ್ ಎಂ. ನಾಯಕ್**
ನೆಫ್ರಾಲಜಿಸ್ಟ್ ಹಾಗೂ ರೀನಲ್ ಸ್ಪೆಷಲಿಸ್ಟ್

Apollo HOSPITALS
— SHESHADRIPURAM —

#1, ಪ್ಲಾಟ್‌ಫಾರಂ ರಸ್ತೆ, ಮಂತ್ರಿ ಮಾಲ್ ಹತ್ತಿರ, ಶೇಷಾದ್ರಿಪುರಂ,
ಬೆಂಗಳೂರು – 560 020
+91 95352 57374 bangalore.apollohospitals.com